ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 8ನೇ ಮೇ ಸಂ 1896ನೇ ಇಸವಿ.

ಸಂ 1896ನೇ ಇಸವಿ ಜುಲೈ 1ರ ಲಾಗಾಯತು ಸಂ 1897ನೇ ಇಸವಿ ಜೂ 30ರವರಿಗೆ, ಆ ಎರಡು ದಿವಸಗಳೂ ಸೇರಿ 12 ತಿಂಗಳ ತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವುದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸಂ 1896ನೇ ಇಸವಿ ಜೂ 8ನೇ ಸೋಮವಾರ ಹಗಲು 1 ಘಂಟೆಯವರಿಗೆ, ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಫಾಯಿಷ್ ಮಾಡಿದೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಳಾಸವೇನೆಂದರೆ,

"I. ಕುರೀ ಮಾಂಸದ ಸರಬರಾಯಿ ದರಖಾಸ್ತು."

"II. ಸವದೇ ಸರಬರಾಯಿ ದರಖಾಸ್ತು."

4. ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಸವದೇ ಸರಬರಾಯಿಗೆ 50 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಕೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

5. ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ಸಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರುಮಾಡಿದ ದರಖಾಸ್ತುದಾರರ ಪೈಕಿ ಇಷ್ಟವಪ್ಪಳ್ಳಂಥಾ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಪ್ಪಿಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಒಂದು ರೂಪಾಯಿಗೆ ಇಪ್ಪು ಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರಪ್ತಿ ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಿನ ಪಟ್ಟಿ.

I. ಮೂಳೆ ಇಲ್ಲದ ಮಾಂಸ—20,000 ಪೌಂಡು.

II. ಒಣಗಿದ ಸವದೆ—ಖೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮಳವೆದ್ದವು $1\frac{1}{2}$ ಲಾಗಾಯತು 3 ಯಿಂಚು ಘನತ್ವವಾಗಿಯೂ ಇರತಕ್ಕದ್ದು 400,000 ಪೌಂಡುಗಳು.

ಪದಾರ್ಥಗಳು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟಿಪ್ಪೆಷ್ಟೇ ಆಗಬೇಕೆಂದು ಖಾತರಿಯಾವುದೂ ಬೇರೆಯುವದಿಲ್ಲ.

7. ಸೂಪರಿಂಟೆಂಡೆಂಟರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ಪೂರ್ತಿಗೊಂಡಿದ್ದಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಜೀವಣೀ ವೊಲಗು ಇಟ್ಟುಕೊಳ್ಳಲ್ಪಡುವುದು; ಮತ್ತು ಅವರ ದರಖಾಸ್ತು ಮಂಜೂರಾಗಿಧೆ ಯಂದು ಅವರಿಗೆ ತಿಳಿಯಪಡಿಸಿದ ಒಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರದು ಕೊಡದೇ ಹೋದರೂ ಸರಿಯೆ, ಆಥವಾ ಕುರೀ ಮಾಂಸಕ್ಕೆ 150 ರೂಪಾಯಿ, ಸವದೆಗೆ [illegible] ರೂಪಾಯಿ, ಈ ಮೇರೆ ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದ[illegible]ಯ ಮೇಲೆ ಕಂಡ ಜೀವಣೀ ವೊಲಗು ಸಿವಾಯಿ ಜಮೆಯಾಗಿ ತೆಗೆದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ತೀ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ್ ರೂಂ ಎಂಬ ಒಂದು ಆಗ್ರಾಣವನ್ನು ಸವದೆ ಇಜಾರೆದಾರರ ವಕ್ಕೆ ಕೊಡಲಾದೀತು; ಆತನು ಅದರಲ್ಲಿ ಸವ್ತೆದಯನ್ನು ಇಟ್ಟುಕೊಳ್ಳತಕ್ಕದ್ದು, ಮತ್ತು ಅದರಲ್ಲಿ ಮಾವಾಗ್ಯೂ ಒಂದು ತಿಂಗಳಿಗೆ ಕಡಮೆ ಇಲ್ಲದಂತೆ ಸರಬರಾಯನ್ನು ಇಟ್ಟುರಬೇಕು. ಕುರೀ ಮಾಂಸವು ಪ್ರತಿ ದಿನವೂ ಬೆಳ್ಳಿಗ್ಗೆ 7 ಘಂಟೆ ವಳಗಾಗಿ ಜೈಲ್‌ನಲ್ಲಿ ಸಿದ್ಧಪಡಿಸತಕ್ಕದ್ದು.

11. ಈ ಕಂಟ್ರಾಕ್ಟನ್ನು ಪಿಕ್ಕಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಪೂರ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಿಬು ಅರಿತು 50 ರೂಪಾಯಿಗೆ ಹೆಚ್ಚದೆ ಬರಿಮಾನೆಯನ್ನು ವಸೂಲು ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿ ಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಳಾಗಿ ತೆಗದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳೆಲ್ಲೆಲ್ಲಾ ಸದರೀ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರ ಫೈಸಲೇ ಅಖೈರ್ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೆಂಡೆಂಟರ ಆಫೀಸನ್ನೇ ಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ ಜೈಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಪ[illegible]ತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ನಿಗೆದುಕೊಂಡ ತರುವಾಯ ತಮ್ಮ[illegible]ರನಂತೆ ನಡೆಯಲು ಇಷ್ಟಪಡದಿದ್ದರೆ, ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿ ಹೋಗುವುದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಆಥವಾ ಕಂಟ್ರಾಕ್ಟಿನಲ್ಲಿ ನಮೂದಾಗಿರುವ ಪದಾರ್ಥಗಳನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನು ಇಜಾರೆದಾರರು ಸರ್ಕಾರಕ್ಕೆ ಭರ್ತೀವಾಡಿ ಕೊಡಬೇಕು. ವಿಚಾರ—ಮೇಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಡಿ. ಎ. ಜೋಕ್ಸ್,
ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟ್.